# ವೈಭವ ಕಲ್ಲು

■ ಚಿಂತಾಮಣಿ ಕೊಡ್ಲೆಕೆರೆ



ಆರ್. ವಿಜಯ ಕುಮಾರಿ

ಕೂಗುತಿದೆ ಕಾಯೊಡೆವ ಕಲ್ಲು
'ಕಿವಿವೆತ್ತ ಕಿವುಡರಿರ,
ಕೇಳಿರಾ ಸೊಲ್ಲು!':

ನೀವೀಗ ಕೈ ಮುಗಿದ ಮೂರ್ತಿ
ನನ್ನಣ್ಣ
ಅವನೂ ನಾನೂ ಇಲ್ಲೇ
ಈ ಕಾಡಿನಲ್ಲೇ
ಬಿದ್ದಿದ್ದೆವಂದು
ಆ ಕಲಾವಿದ ಬಂದು
ಆಯ್ದ ನನ್ನನ್ನೇ
ಕೇಳಿದ: ಕಲ್ಲಪ್ಪ
ನೀನಾಗುವೆಯಾ ಭಗವಂತನ ಮೂರ್ತಿ?
ಹಬ್ಬುವುದು ದಿಗ್ದೇಶಗಳಲಿ ನಿನ್ನಮಲ ಕೀರ್ತಿ !

ಹಿಗ್ಗುತ್ತ ಒಪ್ಪಿದೆ
ಮುಂದೆ ತಪ್ಪಿದೆ!
ಅವನಿತ್ತ ಉಳಿಯ ಏಟು
ಯಮಶಿಕ್ಷೆಯಂತಿತ್ತು ಥೇಟು!
ತಡೆಯಲಾಗದೆ ಅಂದು ಸಂಜೆ
ಅವನ ಕಾಲಿಗೆ ಬಿದ್ದು ಬೇಡಿಕೊಂಡೆ:

ಅಯ್ಯೋ ಶಿಲ್ಪಿಯೆ ನನ್ನ
ಬಿಟ್ಟುಬಿಡು ಅಣ್ಣಾ
ನಾ ತಾಳಲಾರೆ
ಉಳಿಯ ಏಟನ್ನ

ನೊಂದನು ಕಲಾವಿದ
ನನ್ನನು
ಮೂಲೆಗೆ ನೂಕಿದ

ಬಂದವನಿವನು ಅಣ್ಣ ಈ ಶಿಲೆ
ಗೆದ್ದನು ಇವನು
ಶಿಲ್ಪಿ ಇವನ ಮೆಟ್ಟಿದಾಗಲೆ!

ಚಾಣದೇಟುಗಳನ್ನು ಸಹಿಸಿದ, ಸಹಿಸಿದ
ಒಂದೆರಡು ಕ್ಷಣವೆ?
ಒಂದೆರಡು ದಿನವೆ?
ಎಲ್ಲಿತ್ತು ಇವನ ಈ ಕಣ್ಣು, ಈ ಮೊಗ
ಈ ಮಂದಹಾಸ?
ಸೃಷ್ಟಿಕರ್ತನ ಸೃಷ್ಟಿ – ಈಗ ಇವ ಜಗದೊಡೆಯ!

ಏನೀ ವಿಲಾಸ!
ಏನೀ ವಿಕಾಸ!

ನಾನಿವನ ಮುಂದೆ
ಬರಿ ಕಲ್ಲುಬಂಡೆ!
ಇವನಿಗಾರತಿ ಪೂಜೆ ನೈವೇದ್ಯ ಉತ್ಸವ
ನಾನಿಲ್ಲಿ ಕಾಯೊಡೆವ ಕಲ್ಲು
ಕಾಯಿ ನೀರಿನ ಸ್ನಾನ
ಕೊಬರಿ ಚೂರ ಪ್ರಸಾದ
ನುಗ್ಗುವರು ಹುಡುಗರು ಚೂರುಗಳ ಹೆಕ್ಕಲು!
ನಾನು ಒಳಗೊಳಗೇ ಬಿಕ್ಕಲು!

ಆದರೂ...

ಶಿಲ್ಪಿ ದೃಷ್ಟಿಯು ಬಿದ್ದ ಪುಣ್ಯದಿಂದ
ಕಾಯೊಡೆವ ಕಲ್ಲಾದೆ ಯುಗಗಳಿಂದ!

ಪಡೆವ ಭಾಗ್ಯಕೆ ಬೇಕು
ಪಡುವ ಪಾಡುಗಳ ಜೋಡಿ
ಎನ್ನುತಿದೆ ದೇವಳದ ಹೊರಗೆ
ಭಗವಂತನೊಡನಾಡಿ

ಕೂಗುತಿದೆ ಕಾಯೊಡೆವ ಕಲ್ಲು
ಕಿವಿವೆತ್ತ ಕಿವುಡರು!
ಕೇಳರಾ ಸೊಲ್ಲು
ಈ ಇರುಳಿನಲ್ಲೂ!
ಈ ಶಾಂತಿಯಲ್ಲೂ! ■